ಓ ಎಸ್ ನಂ. 692/2018

ಪಿ ಡಬ್ಲ್ಯೂ-2

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿಃ 23.04.2025

**ಪಾಟೀ ಸವಾಲುಃ ಶ್ರೀ ಎಸ್ ಎನ್ ಪ್ರತಿವಾದಿ ಪರ ವಕೀಲರಿಂದ**

ನಮ್ಮ ತಂದೆಯು ದಾವೆಯನ್ನು ಸಲ್ಲಿಸಿದ್ದು, ಮೃತ ಪ್ರತಿವಾದಿಯು ನಮ್ಮ ಆಸ್ತಿಗೆ ಬಂದು ಆಸ್ತಿಯನ್ನು ಬಿಟ್ಟುಕೊಡಿ ಎಂದು ತಕರಾರು ಮಾಡಿದ್ದರಿಂದ ದಾವೆ ಸಲ್ಲಿಸಿರುತ್ತಾರೆ. ದಾವಾಸ್ತಿ ಸರ್ವೆ ನಂಬರ್ 14/1. ದಾವಾಸ್ತಿಯ ಸರ್ವೆ ನಂಬರ್ ನಲ್ಲಿ ಮೂಲತಃ 3 ಎಕರೆ 10 ಗುಂಟೆ ಆಸ್ತಿ ಇತ್ತು. ದಾವಾಸ್ತಿಯ ಸರ್ವೆ ನಂಬರ್ ನಲ್ಲಿ ಮೂಲತಃ 8 ಎಕರೆ ಆಸ್ತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ 13 ಗುಂಟೆ ಆಸ್ತಿಗೆ ದಾವೆ ಸಲ್ಲಿಸಿರುತ್ತಾರೆ. ದಾವಾಸ್ತಿಯ ಪೂರ್ವ ಮಾಲೀಕರು ಸಿಂಗಮ್ಮ. ಸಿಂಗಮ್ಮ ಅವರಿಗೆ ದಾವಾಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನನ್ನ ತಾತ ಖರೀದಿಸಿರುತ್ತಾರೆ ಎನ್ನುತ್ತಾರೆ. ದಾವಾಸ್ತಿಯನ್ನು ಸಿಂಗಮ್ಮ ಅವರಿಂದ ನನ್ನ ತಾತ ಖರೀದಿಸುವ ಪೂರ್ವದಲ್ಲಿ ದಾಖಾಲಾತಿ ಯಾರ ಹೆಸರಿನಲ್ಲಿತ್ತು ಎಂದು ನಾನು ನೋಡಿಲ್ಲ. ದಾವಾಸ್ತಿ ಸರ್ವೆ ನಂಬರ್ 14/1ರಲ್ಲಿ 2 ಎಕರೆ 38 ಗುಂಟೆ ಆಸ್ತಿಯು ಮೃತ 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಬಗ್ಗೆ ದಾಖಲಾತಿಯನ್ನು ನಾನು ನೋಡಿರುತ್ತೇನೆ. 1ನೇ ಪ್ರತಿವಾದಿಯು ಬದುಕಿರುವವರೆಗೂ ಸದರಿ ಆಸ್ತಿಯು ಅವರ ಸ್ವಾಧೀನದಲ್ಲಿಯೇ ಇತ್ತು ಎಂದರೆ ಸರಿ. 1ನೇ ಪ್ರತಿವಾದಿ ಮೃತಪಟ್ಟ ನಂತರ ಅವರ ಹೆಂಡತಿ ಮತ್ತು ಮಕ್ಕಳಾದ 1(ಎ) ಯಿಂದ 1(ಸಿ)ನೇ ಪ್ರತಿವಾದಿಯರು ಸ್ವಾಧೀನಹೊಂದಿ ಅನುಭವಿಸುತ್ತಿದ್ದಾರೆ ಎಂದರೆ ಸರಿ. ದಾವಾ ಸರ್ವೆ ನಂಬರ್ ನಲ್ಲಿ 12 ಗುಂಟೆ ಕರಾಬು ಜಾಗ ಇದೆ ಎಂದರೆ ಸರಿ. ಸದರಿ ಕರಾಬು ಜಾಗದಲ್ಲಿ ಟಾರು ರಸ್ತೆ ಹಾದುಹೋಗಿದೆ ಎಂದರೆ ಸರಿಯಲ್ಲ. ರಸ್ತೆಯು ಸರ್ವೆ ನಂಬರ್ 14/1ರಲ್ಲಿದೆ. ದಾವೆ ಸಲ್ಲಿಸುವ ಪೂರ್ವದಲ್ಲಿ ದಾವಾಸ್ತಿಯ ದಾಖಲಾತಿಗಳು ಯಾರ ಹೆಸರಿನಲ್ಲಿತ್ತು ಎಂದು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿಯು ಸಿಂಗಮ್ಮ ಅವರಿಂದ ನನ್ನ ತಾತ ಖರೀದಿಸಿದ್ದು, ಸಿಂಗಮ್ಮ ಅವರಿಗೆ ಆಸ್ತಿಯು ಹೇಗೆ

ಬಂತು ಎಂದು ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಯಾವುದೇ ಒಂದು ಆಸ್ತಿಯನ್ನು ಖರೀದಿಸಿದಾಗ ಅದಕ್ಕೆ ಸಂಬಂಧ ಪಟ್ಟ ದಾಖಲಾತಿಗಳನ್ನು ಅವರ ಹೆಸರಿಗೆ ವರ್ಗಾಯಿಸಿಕೊಳ್ಳುತ್ತಾರೆ ಎಂದರೆ ಸರಿ. ನನ್ನ ತಾತ ಮೊಹಮ್ಮದ್ ಫಕ್ರುದ್ದೀನ್ ಅವರು ಸಿಂಗಮ್ಮ ಅವರಿಂದ ದಾವಾಸ್ತಿಯನ್ನು ಖರೀದಿಸಿದ ನಂತರ 2015ರವರೆಗೆ ದಾವಾಸ್ತಿಯ ದಾಖಲಾತಿಗಳನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಂಡಿಲ್ಲ. ನನ್ನ ತಾತ ಮೊಹಮ್ಮದ್ ಫಕ್ರುದ್ದೀನ್ ಅವರು ಶುದ್ಧಕ್ರಯಪತ್ರ ಮೂಲಕ ದಾವಾಸ್ತಿಯನ್ನು ಖರೀದಿಸದೇ ಇರುವುದರಿಂದ ಅವರು ತನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ಋಣಭಾರ ರಾಹಿತ್ಯ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯಲ್ಲಿ ಅಬ್ದುಲ್ ಘನ್ನಿ ಅವರಿಂದ ಸರ್ವೆ ನಂಬರ್ 14/1ರಲ್ಲಿ 2 ಎಕರೆ 38 ಗುಂಟೆ ಆಸ್ತಿಯು ಲಕ್ಷ್ಮಮ್ಮ ಅವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು. ನಿ ಪಿ 2 ಪಹಣಿ ಪತ್ರಿಕೆಯಲ್ಲಿ ಅಬ್ದುಲ್ ಘನ್ನಿ ಸಾಬ್ ಉರುಫ್ ಅಬ್ಬಾ ಸಾಬ್ ರವರ ಹೆಸರಿನಲ್ಲಿ ಸರ್ವೆ ನಂಬರ್ 14/1ರಲ್ಲಿ 2 ಎಕರೆ 38 ಗುಂಟೆ ಆಸ್ತಿಯಿದೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಸ.ಇ.ಎ.ಒ.,

Sd/-

3ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.